ಸ್ವಲ್ಪ ಒಳ್ಳೆಯ ರೀತಿಯಲ್ಲಿ ನಡೆದಿದೆ. ಆದೊಂದೇ ಕಾರಣಕ್ಕೆ ನಾವು ಎಲ್ಲವನ್ನೂ ಕೂಡ ರಿಲ್ಯಾಕ್ಸ್ ಮಾಡುವುದಕ್ಕಾಗುವುದಿಲ್ಲ. ಒಟ್ಟಾರೆ ನಮ್ಮ ರಾಜ್ಯದಲ್ಲಿರತಕ್ಕಂಥ 1109 ನೌಕರರ ಪತ್ತಿನ ಸಹಕಾರಿ ಸಂಘಗಳು ಮತ್ತು 534 ವ್ಯವಸಾಯೇತರರ ಪತ್ತಿನ ಸಹಕಾರ ಸಂಘಗಳು ಇವೆ. ಅದರಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಸುಮಾರು 110 ವ್ಯವಸಾಯೇತರ ಪತ್ತಿನ ಸಹಕಾರಿ ಸಂಘಗಳು ಮತ್ತು 165 ನೌಕರರ ಪತ್ತಿನ ಸಹಕಾರಿ ಸಂಘಗಳು ಇವೆ. ಈಗಾಗಲೇ ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿಗೆ ದಿನ ದಿನ ಅರ್ಜಿಗಳು ಬರುತ್ತಿದೆ. ಆದರೆ ಎಲ್ಲೆಲ್ಲಿ ಎಕನಾಮಿಕಲ್ ಫೀಸಿಬಲ್ ಇದೆ ಮತ್ತು ನಮ್ಮ ಪ್ರೈಮರಿ ಕೋ-ಆಪರೇಟಿವ್‌ಗಳಿಗೆ ತೊಂದರೆಯಾಗುವುದಿಲ್ಲ ಅಂತ ಕಡೆ ನಾವು ಪರ್ಮಿಷನ್ ಕೊಡುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ :– ಮಾನ್ಯ ಅಧ್ಯಕ್ಷರೇ, ಎಲ್ಲಾ ಕೋಮಿನವರಿಗೂ ಪ್ರಾತಿನಿಧ್ಯವನ್ನು ಕೊಡಲಿಕ್ಕೆ ಏನು ಕ್ರಮಕ್ಕೆಗೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಯಾರೂ ಬಂದು ನಮ್ಮಲ್ಲಿ ಕೇಳುವುದೇ ಇಲ್ಲ. ಏಕೆಂದರೆ ಅವರವರದ್ದೇ ಹಣ ಇದೆ. ಅವರು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಸರ್ಕಾರ ಅವರಿಗೆ ಹಣ ಕೊಡತಕ್ಕಂಥ ಪ್ರಸಂಗ ಬರುವುದಿಲ್ಲ.

ಬಾಡಿಗೆ ನಿಯಂತ್ರಣಾಧಿಕಾರಿಗಳ ಕಚೇರಿಗಳ ಸಂಖ್ಯೆ

323 (1923): ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಾಡಿಗೆ ನಿಯಂತ್ರಣ ಕಚೇರಿಗಳು ರಾಜ್ಯದಲ್ಲಿ ಎಲ್ಲಿವೆ, ಎಷ್ಟಿವೆ;

ಆ. ಪ್ರತಿ ತಿಂಗಳು ಸಿಬ್ಬಂದಿ ಸಂಬಳ ಮತ್ತು ಇತರೆ ಬಾಬ್ತುಗಳಿಗೆ ತಗಲುವ ಖರ್ಚು ಎಷ್ಟು;

ಇ. ಪ್ರತಿ ತಿಂಗಳಲ್ಲಿ ಎಷ್ಟು ಅರ್ಜಿದಾರರಿಗೆ ಮನೆಗಳನ್ನು ನೀಡುತ್ತಿದ್ದಾರೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ. 36 ಬಾಡಿಗೆ ನಿಯಂತ್ರಣ ಕಚೇರಿಗಳು ರಾಜ್ಯದಲ್ಲಿವೆ. (ಪಟ್ಟಿ ಲಗತ್ತಿಸಿದೆ)

ಆ. ಪ್ರತಿ ತಿಂಗಳು ಸಿಬ್ಬಂದಿ ಸಂಬಳ ಮತ್ತು ಇತರೆ ಖರ್ಚು ಈ ಕೆಳಕಂಡಂತಿದೆ.

ಬೆಂಗಳೂರು ವಿಭಾಗ:

	ಸಿಬ್ಬಂದಿ ಸಂಬಳ ರೂ.ಗಳಲ್ಲಿ	ಇತರೆ ಖರ್ಚು ರೂ.ಗಳಲ್ಲಿ
ಬೆಂಗಳೂರು (ನಗರ)	1,81,174	20,009
ದಾವಣಗೆರೆ ನಗರ	0,03,600 (ಇತರ ಖರ್ಚು ಸೇರಿ)	–

ಮೈಸೂರು ವಿಭಾಗ:

ಮೈಸೂರು	0,07,337	ಇತರೆ ಖರ್ಚು ಸೇರಿ

ಹಾಸನ	0,06,223	ಇತರೆ ಖರ್ಚು ಸೇರಿ
ದಕ್ಷಿಣ ಕನ್ನಡ	0.11,000	ಇತರೆ ಖರ್ಚು ಸೇರಿ

ಬೆಳಗಾಂ ವಿಭಾಗ:

ಬೆಳಗಾಂ	0,06,373	ಇತರೆ ಖರ್ಚು ಸೇರಿ
ಬಿಜಾಪುರ	0,05,346	ಇತರೆ ಖರ್ಚು ಸೇರಿ
ಧಾರವಾಡ	0,11,384	ಇತರೆ ಖರ್ಚು ಸೇರಿ
ಕಾರವಾರ	0,05,632	ಇತರೆ ಖರ್ಚು ಸೇರಿ

ಗುಲ್ಬರ್ಗಾ ವಿಭಾಗ:

ಸಿಬ್ಬಂದಿ ವೆಚ್ಚ ಏನೂ ಇಲ್ಲ.

ಷರಾ: ಇನ್ನುಳಿದ ಬಾಡಿಗೆ ನಿಯಂತ್ರಣ ಕಚೇರಿಗಳನ್ನು ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು ಅಥವಾ ಸಹಾಯಕ ಆಯುಕ್ತರುಗಳು ನಿರ್ವಹಿಸುವುದರಿಂದ ಬಾಡಿಗೆ ನಿಯಂತ್ರಣ ಕಾರ್ಯಕ್ಕೆಂದು ಪ್ರತ್ಯೇಕ ವೆಚ್ಚ ಇರುವುದಿಲ್ಲ. ಬೆಂಗಳೂರು ನಗರದಲ್ಲಿ ಮಾತ್ರ 4 ಸ್ವತಂತ್ರ ಕಚೇರಿಗಳಿವೆ.

೧. ವಿವರ ಈ ಕೆಳಕಂಡಂತಿದೆ,

ಬೆಂಗಳೂರು ನಗರ	ಸರಾಸರಿ	17 ಮನೆಗಳು
ಚಿತ್ರದುರ್ಗ ಜಿಲ್ಲೆ	ಸರಾಸರಿ	06 ಮನೆಗಳು
ಮೈಸೂರು ಜಿಲ್ಲೆ	ಸರಾಸರಿ	06 ಮನೆಗಳು
ಹಾಸನ ಜಿಲ್ಲೆ	ಸರಾಸರಿ	02 ಮನೆಗಳು
ದಕ್ಷಿಣ ಕನ್ನಡ ಜಿಲ್ಲೆ	ಸರಾಸರಿ	07 ಮನೆಗಳು
ಧಾರವಾಡ ಜಿಲ್ಲೆ	ಸರಾಸರಿ	01 ಮನೆ
ಕಾರವಾರ	ಸರಾಸರಿ	05 ರಿಂದ 10 ಮನೆಗಳು

ಇನ್ನುಳಿದ ಜಿಲ್ಲೆಗಳಲ್ಲಿ, ಮನೆ ಹಂಚಿಕೆ ಸಾಧಾರಣವಾಗಿ ಇಲ್ಲವೆಂದೇ ಹೇಳಬಹುದು.

ಕರ್ನಾಟಕ ರಾಜ್ಯದಲ್ಲಿ ಬಾಡಿಗೆ ನಿಯಂತ್ರಣ ಕಚೇರಿಗಳ ಪಟ್ಟಿ

1. ಬೆಂಗಳೂರು ವಿಭಾಗ:

1. ಬಾಡಿಗೆ ನಿಯಂತ್ರಣಾಧಿಕಾರಿಗಳು, ಪೂರ್ವವಲಯ (ಬೆಂಗಳೂರು ನಗರ)
2. ಬಾಡಿಗೆ ನಿಯಂತ್ರಣಾಧಿಕಾರಿಗಳು, ಪಶ್ಚಿಮವಲಯ (ಬೆಂಗಳೂರು ನಗರ)
3. ಬಾಡಿಗೆ ನಿಯಂತ್ರಣಾಧಿಕಾರಿಗಳು, ಉತ್ತರವಲಯ (ಬೆಂಗಳೂರು ನಗರ)
4. ಬಾಡಿಗೆ ನಿಯಂತ್ರಣಾಧಿಕಾರಿಗಳು, ದಕ್ಷಿಣವಲಯ (ಬೆಂಗಳೂರ ನಗರ)
5. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ತುಮಕೂರು
6. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಕೋಲಾರ
7. ಸಹಾಯಕ ಆಯುಕ್ತರು, ಕೋಲಾರ ಉಪ ವಿಭಾಗ, ಕೋಲಾರ
8. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಶಿವಮೊಗ್ಗ
9. ಸಹಾಯಕ ಆಯುಕ್ತರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ

10. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಚಿತ್ರದುರ್ಗ
11. ಸಹಾಯಕ ಆಯುಕ್ತರು, ದಾವಣಗೆರೆ ಉಪವಿಭಾಗ, ದಾವಣಗೆರೆ.

2. ಮೈಸೂರು ವಿಭಾಗ:

12. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಮೈಸೂರು
13. ಸಹಾಯಕ ಆಯುಕ್ತರು, ಮೈಸೂರು ಉಪವಿಭಾಗ, ಮೈಸೂರು
14. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಮಂಡ್ಯ
15. ಸಹಾಯಕ ಆಯುಕ್ತರು, ಮಂಡ್ಯ ಉಪವಿಭಾಗ, ಮಂಡ್ಯ
16. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಚಿಕ್ಕಮಗಳೂರು
17. ಸಹಾಯಕ ಆಯುಕ್ತರು, ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು
18. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಮಡಿಕೇರಿ
19. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಹಾಸನ
20. ಸಹಾಯಕ ಆಯುಕ್ತರು, ಹಾಸನ ಉಪವಿಭಾಗ, ಹಾಸನ
21. ಸಹಾಯಕ ಆಯುಕ್ತರು, ಪುತ್ತೂರು ಉಪವಿಭಾಗ, ಪುತ್ತೂರು
22. ಸಹಾಯಕ ಆಯುಕ್ತರು, ಮಂಗಳೂರು ಉಪವಿಭಾಗ, ಮಂಗಳೂರು
23. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
24. ಸಹಾಯಕ ಆಯುಕ್ತರು, ಕುಂದಾಪುರ ಉಪವಿಭಾಗ, ಕುಂದಾಪುರ

3. ಬೆಳಗಾಂ ವಿಭಾಗ:–

25. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಬೆಳಗಾಂ
26. ಸಹಾಯಕ ಆಯುಕ್ತರು, ಚಿಕ್ಕೋಡಿ ಉಪವಿಭಾಗ, ಚಿಕ್ಕೋಡಿ
27. ಜಿಲ್ಲಾದಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಬಿಜಾಪುರ
28. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಧಾರವಾಡ
29. ಸಹಾಯಕ ಆಯುಕ್ತರು, ಧಾರವಾಡ ಉಪವಿಭಾಗ, ಧಾರವಾಡ
30. ಸಹಾಯಕ ಆಯುಕ್ತರು, ಗದಗ ಉಪವಿಭಾಗ, ಗದಗ
31. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಉತ್ತರ ಕನ್ನಡ ಜಿಲ್ಲೆ.

4. ಗುಲ್ಬರ್ಗಾ ವಿಭಾಗ:–

32. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಗುಲ್ಬರ್ಗಾ
33. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಬೀದರ್
34. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಬಳ್ಳಾರಿ
35. ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ರಾಯಚೂರು
36. ಸಹಾಯಕ ಆಯುಕ್ತರು, ಹೊಸಪೇಟೆ ಉಪವಿಭಾಗ, ಹೊಸಪೇಟೆ.

ಶ್ರೀ ಎಂ. ಪಿ. ವೆಂಕಟೇಶ್:– ಮಾನ್ಯ ಅಧ್ಯಕ್ಷರೇ, ಬಾಡಿಗೆ ನಿಯುತ್ರಣ ಕಚೇರಿ, ಬೆಂಗಳೂರಿನಲ್ಲಿದೆ. ಅದಕ್ಕೆ ಪ್ರತಿ ತಿಂಗಳು ಎಷ್ಟು ಖರ್ಚು ಆಗುತ್ತದೆ ಅಂದರೆ 2ಲಕ್ಷ ರೂಪಾಯಿ ಖರ್ಚಾಗುತ್ತದೆ. ಅದಕ್ಕೆ ಎಷ್ಟು ಮನೆಗಳನ್ನು ತಾವು ಕೊಡುತ್ತೀರಿ ಅಂದರೆ 17 ಮನೆಗಳನ್ನು ಕೊಡುತ್ತಿದ್ದೇವೆಂದು ಹೇಳಿದ್ದಾರೆ. 17 ಮನೆಗಳನ್ನು ಮಂಜೂರಾತಿ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಎಷ್ಟು ಮನೆಗಳನ್ನು ಅವರು ಈ ಅರ್ಜಿದಾರರಿಗೆ ಕೊಡುತ್ತಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ:– ಮಾನ್ಯ ಅಧ್ಯಕ್ಷರೇ, ಆವರೇಜ್ 15 ರಿಂದ 17 ಮನೆಗಳನ್ನು ನಾವು ಕೊಡುತ್ತಿದ್ದೇವೆಂದು ಉತ್ತರದಲ್ಲಿ ಕೊಟ್ಟಿದ್ದೇವೆ. ಆ 17 ಮನೆಗಳಲ್ಲಿ ಕೆಲವರು ಅಪೀಲ್ ಹೋಗಿರುತ್ತಾರೆ. ಇನ್ನು ಕೆಲವರು ಅಲಾಟ್‌ಮೆಂಟ್ ಆದ ಮೇಲೆ ಮನೆಯನ್ನೇ ಒಡೆದು ಹಾಕಿರುತ್ತಾರೆ. ಮತ್ತೆ ಕೆಲವರು ಅಲಾಟ್‌ಮೆಂಟ್ ಆದಾಗ, ಮನೆಗೆ ಹೋಗಿ ನೋಡಿದಾಗ ಈ ಮನೆ ವಾಸಕ್ಕೆ ಯೋಗ್ಯವಲ್ಲ ಎಂದು ತಿಳಿದುಕೊಂಡು ಡಿಪಾಸಿಟ್ಟನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ಆದ್ದರಿಂದ 17 ಮನೆಗಳ ಒಂದು ತಿಂಗಳಿಗೆ ಅಲಾಟ್ ಆದರೂ ಆ 17 ಮನೆಗೆ ಹೋಗಿ ಅವರು ಆಕ್ಯುಪೈ ಮಾಡಿಕೊಳ್ಳುತ್ತಾರೆ ಎಂದು ಹೇಳುವಂತಹ ಸ್ಥಿತಿಯಲ್ಲಿ ಇಲ್ಲ.

ಶ್ರೀ ಎಂ. ಪಿ. ವೆಂಕಟೇಶ್:– ಮಾನ್ಯ ಮಂತ್ರಿಗಳು ಹೇಳಿದ ಹಾಗೆ 17 ಮನೆಯಲ್ಲಿ 2-3-4 ಮನೆಗಳಿಗೆ ಅವರು ಕೋರ್ಟಿನಿಂದ ಸ್ಟೇ ತರುತ್ತಾರೆ. ಕಚೇರಿಗಳಿಗೆ ಪ್ರತಿ ತಿಂಗಳು 2 ಲಕ್ಷವನ್ನು ಖರ್ಚು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇವರು ಮೈಸೂರು ಮತ್ತು ಗುಲ್ಬರ್ಗ ಇಂತಹ ಕಡೆ ಕೇಂದ್ರ ಸ್ಥಾನದ ಸಹಾಯಕರು ಮತ್ತು ಅಸಿಸ್ಟೆಂಟ್ ಕಮೀಷನರ್ ಏನು ಇರುತ್ತಾರೆ ಅವರಿಗೆ ರೆಂಟ್ ಕಂಟ್ರೋಲ್ ಮನೆಗಳನ್ನು ಅಲಾಟ್ ಮಾಡಲು ವಹಿಸುತ್ತಾರೆ. ಬೆಂಗಳೂರು ನಗರದಲ್ಲಿ ಮತ್ತು ಇತರೆ ಕಡೆಗಳಲ್ಲಿ ಸೆಪರೇಟಾಗಿ ಕಚೇರಿಗಳು ಇವೆ, ಅವನ್ನು ರದ್ದು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ತಮ್ಮ ಮನಸ್ಸಿನಲ್ಲಿ ತಾವು ಈ ಉತ್ತರವನ್ನು ಕೊಟ್ಟಿರುವುದನ್ನು ನೋಡಿದಾಗ ಇದನ್ನು ರದ್ದು ಮಾಡುವ ಭಾವನೆ ಈಗಾಗಲೇ ಬಂದಿರಬೇಕೆಂದು ಕಾಣುತ್ತದೆ. ಮಾನ್ಯ ಈಗಿನ ಕಂದಾಯ ಮಂತ್ರಿಗಳು ಹಿಂದೆ ಅಬಕಾರಿ ಮಂತ್ರಿಯಾಗಿದ್ದಾಗ ಒಳ್ಳೆಯ ಕೆಲಸವನ್ನು ಮಾಡಿ ಕೀರ್ತಿಯನ್ನು ಪಡೆದುಕೊಂಡಿದ್ದಾರೆ. ಈಗ ಕಂದಾಯ ಸಚಿವರಾಗಿ ಒಳ್ಳೆಯ ಕೆಲಸ ಮಾಡುತ್ತಾರೆ. ಇಂತಹ ಕಛೇರಿಯನ್ನು ಮುಚ್ಚುವುದರಿಂದ ಸರ್ಕಾರಕ್ಕೆ ಆದಾಯ ಅಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ:– ಈಗಾಗಲೇ ಇದರ ಬಗ್ಗೆ ಒಂದು ಹೈ ಲೆವಲ್ ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿ ಈಗಾಗಲೇ ಒಂದು ಮೀಟಿಂಗನ್ನು ನಡೆಸಿದೆ. ಮತ್ತು 12ನೇ ತಾರೀಖು ಮತ್ತೊಂದು ಮೀಟಿಂಗ್ ಇದೆ. ಮೀಟಿಂಗ್ ಆದ ಮೇಲೆ ಅವರು ವರದಿಯನ್ನು ಕೊಡುತ್ತಾರೆ. ಕೇಂದ್ರ ಸರ್ಕಾರದವರು ಒಂದು ಮಾಡಲ್ ಮಸೂದೆಯನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ಕಮಿಟಿಯವರು ಇಟ್ಟುಕೊಂಡಿರುತ್ತಾರೆ. ಹಿಂದೆ ನಮ್ಮ ಸರ್ಕಾರವೇ ರಚನೆ ಮಾಡಿದಂತಹ ಪ್ರಮೀಳಾ ಕಮಿಟಿ ಇತ್ತು. ಅವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದನ್ನು ಎಲ್ಲಾ ಇಟ್ಟುಕೊಂಡು ನೋಡಿ ಒಂದು ಮಸೂದೆಯನ್ನು ತಯಾರು ಮಾಡುತ್ತಾರೆ. ಅದು ಸದನದ ಮುಂದೆ ಬರುತ್ತದೆ. ಇದನ್ನು ಇಟ್ಟುಕೊಳ್ಳಬೇಕೇ ಬಿಡಬೇಕೇ ಎನ್ನುವುದು ಸದನಕ್ಕೆ ಬಿಟ್ಟ ವಿಷಯವಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ:– ತಾವು ಹೋದ ಸಲ ಹೇಳಿದಿರಿ. ಅದು ಏನೆಂದರೆ ರೆಂಟ್ ಕಂಟ್ರೋಲ್ ಆಕ್ಟ್‌ಗೆ ಅಮೆಂಡಮೆಂಟ್ ಮಾಡಿದಾಗ ಪಿರಿಯಡ್ ಎಕ್ಸ್‌ಟೆಂಡ್ ಮಾಡಿದಾಗ comprehensive legislation ತರುತ್ತೇವೆಂದು. Whether that legislation ಈ ಅಧಿವೇಶನದಲ್ಲಿ ಬರಬಹುದೇ ಎಂದು ಕೇಳುತ್ತೇವೆ. ತಮ್ಮ ಕಡೆಯಿಂದ ಭರವಸೆ ನನಗೆ ಬೇಕಾಗಿದೆ. ಏಕೆಂದರೆ ಈ ರೆಂಟ್ ಕಂಟ್ರೋಲ್ ಆಕ್ಟ್ ಆದಾಗ ಬಹಳ ಪ್ರಾವಿಷನ್ ರಿಡಂಡೇಟ್ ಆಗಿದೆ. ಅದನ್ನು ಹಳೆಯ ಕಾಲದಲ್ಲಿ ಮಾಡಿದ್ದುದು. ಅದರಲ್ಲಿ ಸಾಕಷ್ಟು ಬದಲಾವಣೆಯಾಗಬೇಕಾಗುತ್ತದೆ. ಇವತ್ತಿನ ಸನ್ನಿವೇಶಕ್ಕೆ; ಟೋಟಲಿ ಹೌಸಿಂಗ್ ಆಕ್ಟಿವಿಟೀಸ್ ಬಹಳ ಕಷ್ಟವಾಗಿದೆ because of some hazards ಹಾಗಾಗಿ ಲ್ಯಾಂಡ್ ಲಾರ್ಡ್ಸ್‌ಗೂ ಕೆಲವು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಹಾಗೂ ಟೆನೆಂಟ್ಸ್‌ಗೂ ಪ್ರೊಟೆಕ್ಷನ್ ಕೊಡಬೇಕಾಗುತ್ತದೆ. Comprehensive legislation Bill ನೀವು ಯಾವಾಗ ತೆಗೆದುಕೊಂಡು ಬರುತ್ತೀರೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ನಾವು ಈಗಾಗಲೇ ಕಮಿಟಿಯನ್ನು ರಚನೆ ಮಾಡಿ ಕಮಿಟಿಯವರು ಮೀಟಿಂಗನ್ನು ನಡೆಸಿದ್ದಾರೆ. ನಾಳೆ ಫೈನಲ್ ಮೀಟಿಂಗ್ ಇದೆ, ಮೀಟಿಂಗ್ ಆದ ಮೇಲೆ ಅವರ ರೆಕಮಂಡೇಷನ್ ಏನು ಬರುತ್ತದೆ ಅದರ ಬೇಸಿಸ್ ಮೇಲೆ ಒಂದು ಮಸೂದೆ ತಯಾರು ಮಾಡಿ ಈ ಮನೆಯ ಮುಂದೆ ಇಡುತ್ತೇವೆ. ಮಾನ್ಯ ಸದಸ್ಯರು ಜಾಗ್ರತೆ ಬರಬೇಕೆಂದು ಕೇಳುತ್ತಾರೆ, ಅದು ನನ್ನ ಅಭಿಪ್ರಾಯದಲ್ಲಿ ಇದ್ದರೂ ಒಂದೇ ಇಲ್ಲದೆ ಇದ್ದರೂ ಒಂದೇ. ಆದರಿಂದ ಏನೂ ಪರ್ಪಸ್ ಸರ್ವ್ ಆಗಿಲ್ಲ. ಈ ಕಾಯಿದೆ ಇರುವುದರಿಂದ ಹೊಸದಾಗಿ ಯಾರೂ ಮನೆಕಟ್ಟಿ ಬಾಡಿಗೆಗೆ ಯಾರೂ ಕೊಡುವುದಕ್ಕೆ ತಯಾರು ಇಲ್ಲ. ಏಕೆಂದರೆ ಅದಕ್ಕೆ ಇನ್ವೆಸ್ಟ್‌ಮೆಂಟ್ ಮಾಡಿದರೆ ಒಂದು ಪರ್ಸೆಂಟ್ ಬಡ್ಡಿ ಸಿಕ್ಕುವುದಿಲ್ಲ. ಬ್ಯಾಂಕಿಗೆ ಹಾಕಿದರೆ 10 ಪರ್ಸೆಂಟ್ ಆದರೂ ಬರುತ್ತದೆ.

ಅಧ್ಯಕ್ಷರು:– ಮಾನ್ಯ ಬಸವರಾಜರವರೇ ತಮ್ಮ ಪ್ರಶ್ನೆ ಸಂಖ್ಯೆ: 1755 ನ್ನು ಮುಂದೂಡಲಾಗಿದೆ. ಮಾನ್ಯ ಮಂತ್ರಿಗಳು ವಿನಂತಿ ಮಾಡಿಕೊಂಡಿದ್ದಾರೆ. ಅವರು ತುರ್ತಾದ ಕೆಲಸದ ಮೇಲೆ ಹೋಗಿರುವುದರಿಂದ ನಿಮ್ಮ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ.

ಶ್ರೀ ಬಸವರಾಜ್:– ನನ್ನದು ಯಾವುದೂ ಪ್ರಶ್ನೆಗಳು ಬರಲಿಲ್ಲ.

ಅಧ್ಯಕ್ಷರು:– ಈಗ ನನಗೆ ಒಂದು 10 ನಿಮಿಷದ ಕೆಳಗಡೆ ಹೇಳಿ ಹೋದರು.

ಶ್ರೀ ಬಸವರಾಜ್:– ಆಮೇಲೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು:– ಆಮೇಲೆ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಮಾನ್ಯ ರುದ್ರಪ್ಪನವರೇ ತಮ್ಮ ಪ್ರಶ್ನೆ ಸಂಖ್ಯೆ 1910. 15 ದಿವಸ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಎಸ್. ರುದ್ರಪ್ಪ:– 15 ದಿವಸದೊಳಗೆ ಅಸೆಂಬ್ಲಿ ಮುಗಿದು ಹೋಗುತ್ತದೆ. ಮೊನ್ನೆ ತಾನೇ ನಮ್ಮದೊಂದು ಪ್ರಶ್ನೆ ಹೀಗೆಯೇ ಆಯಿತು ಮಾನ್ಯ ಹಾಲಪ್ಪನವರು ಆಗ ಇರಲಿಲ್ಲ. ಈವತ್ತು ಕೂಡ ಹೀಗೆ ಆಯಿತು. ಬರುವುದೇ ನಮ್ಮದು ಅಪರೂಪಕ್ಕೆ ಒಂದು ಪ್ರಶ್ನೆ. ಈ ರೀತಿ ಮಾಡಿದರೆ ಹೇಗೆ ?

ಶ್ರೀ ವಿಜಯಕುಮಾರ್ ಶೆಟ್ಟಿ:– ಕೆಲವರದ್ದು ಪ್ರಶ್ನೆಯನ್ನು ಹಾಕಿದರೆ ಬರುವುದೇ ಇಲ್ಲ.

ಶ್ರೀ ಎಸ್. ರುದ್ರಪ್ಪ:– ಮಾನ್ಯ ಸಹಕಾರ ಮಂತ್ರಿಗಳಿಗೆ ಯುವಕರ ಮೇಲೆ ಹೆಚ್ಚಿಗೆ ಗಮನ ಇಲ್ಲ ಎಂದು ಕಾಣುತ್ತದೆ.

ಶ್ರೀ ವಿಜಯಕುಮಾರ್ ಶೆಟ್ಟಿ:– ಕೆಲವರದ್ದು ಹತ್ತಾರು ಪ್ರಶ್ನೆಗಳು ಬರುತ್ತವೆ. ನಮ್ಮದು ಒಂದೂ ಕೂಡ ಬರುವುದಿಲ್ಲ.

ಸಹಕಾರ ಇಲಾಖೆಯಲ್ಲಿ ನಿಯೋಜಿತ ಸೇವೆಯಲ್ಲಿರುವವರ ಸಂಖ್ಯೆ

328 (1693): ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):-

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಹಕಾರ ಇಲಾಖೆಯ ಸಹಾಯಕ ನಿಬಂಧಕರ (ಎ.ಆರ್.ಸಿ.ಎಸ್) ಹುದ್ದೆಯಿಂದ ಹಿಡಿದು ಅಧಿಕ ನಿಬಂಧಕರ ಹುದ್ದೆಯವರೆಗೆ ಅಂದರೆ ಡಿ.ಆರ್.ಸಿ.ಎಸ್., ಜೆ.ಆರ್.ಸಿ.ಎಸ್, ಅಧಿಕ ಆರ್.ಸಿ.ಎಸ್.,ವರೆಗೆ ನಿಯೋಜಿತ ಸೇವೆಯ ಮೇಲೆ ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳ ಹುದ್ದೆ ಎಷ್ಟು;